# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಬೃಹತ್ ಗೋಪುರ, ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು - 560 001.

ಡಾ:ಬಿಆರ್‌ಅಂಅನಿ/ಪ್ರಕ್ರಿ-ಕ್ರೆತ/ಸಾಮಾನ್ಯ/2013-14 /14462 ದಿನಾಂಕ:05.12.2013

**ಸುತ್ತೋಲೆ ಸಂ:3/13-14**

ವಿಷಯ: ನಿಗಮದಿಂದ 2ನೇ ಸಲ ಸೌಲಭ್ಯ ಪಡೆಯಲು ಅವಕಾಶವಿಲ್ಲದಿರುವ ಬಗ್ಗೆ.

*****

ನಿಗಮದಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಿಗಮದಿಂದ ಸೌಲಭ್ಯ ಪಡೆಯಲು ವಿಧಿಸಿರುವ ಅರ್ಹತಾ ನಿಯಮಗಳಲ್ಲಿ ಈಗಾಗಲೇ ನಿಗಮದ ಯಾವುದೇ ಯೋಜನೆಗಳಡಿ ಸೌಲಭ್ಯ ಪಡೆದಿರಬಾರದು ಎಂಬ ಅಂಶ ಪ್ರಮುಖವಾಗಿರುತ್ತದೆ. ಅಂದರೆ ಒಂದು ಸಲ ಮಾತ್ರ ನಿಗಮದಿಂದ ಯಾವುದಾದರೊಂದು ಯೋಜನೆಯಡಿ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಈ ಕುಟುಂಬವು ಮತ್ತೆ ನಿಗಮದಿಂದ 2ನೇ ಸಲ ಸೌಲಭ್ಯ ಪಡೆಯಲು ಅವಕಾಶವಿರುವುದಿಲ್ಲ. ಕಾರಣ, ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಸುಮಾರು 20 ಲಕ್ಷ ಕುಟುಂಬಗಳಿದ್ದು, ನಿಗಮದಿಂದ 31.3.2013 ರವರೆಗೆ ನಿಗಮದಿಂದ 8.29 ಲಕ್ಷ ಕುಟುಂಬಗಳಿಗೆ ಮಾತ್ರ ಸೌಲಭ್ಯ ಕಲ್ಪಿಸಲಾಗಿದೆ. ಇನ್ನೂ ಒಂದು ಸಲವೂ ಸೌಲಭ್ಯ ಪಡೆಯದ 11.71 ಲಕ್ಷ ಕುಟುಂಬಗಳು ಬಾಕಿ ಇರುತ್ತವೆ. ಎಲ್ಲಾ ಕುಟುಂಬಗಳೂ ಒಂದು ಸಲವಾದರೂ ಸೌಲಭ್ಯ ಪಡೆದ ನಂತರವೇ, 2ನೇ ಸೌಲಭ್ಯ ಕೊಡುವ ಬಗ್ಗೆ ಯೋಚಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ, ಒಂದು ಕುಟುಂಬಕ್ಕೆ ನಿಗಮದಿಂದ ಒಂದು ಸೌಲಭ್ಯಕ್ಕೆ ಮಾತ್ರ ಪರಿಗಣಿಸಲು ಅವಕಾಶವಿದ್ದು ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದೆ. ಸೌಲಭ್ಯ ಕೋರಿ ಅರ್ಜಿ ಬಂದಾಗ ಹಿಂದೆ ನಿಗಮದಿಂದ ಸೌಲಭ್ಯ ಪಡೆದಿರುವ ಬಗ್ಗೆ ವಿವರವಾಗಿ ಪರಿಶೀಲಿಸಿ, ಈಗಾಗಲೇ ಸೌಲಭ್ಯ ಪಡೆಯದಿದ್ದಲ್ಲಿ ಮಾತ್ರ ಪರಿಗಣಿಸಲು ತಿಳಿಸಿದೆ. ಈ ದಿಸೆಯಲ್ಲಿ ಯಾವುದೇ ನಿರ್ಲಕ್ಷ್ಯ ಕಂಡು ಬಂದಲ್ಲಿ ಜಿಲ್ಲಾ ವ್ಯವಸ್ಥಾಪಕರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು

ಜಿಲ್ಲಾ ವ್ಯವಸ್ಥಾಪಕರು,
ದಾವಣಗೆರೆ ಜಿಲ್ಲೆ

ಪ್ರತಿಯನ್ನು:

1. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ
2. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ
3. ಕಚೇರಿ ಪ್ರತಿ

Scanned with CamScanner